**ಸಾಕ್ಷಿಗೆ ದಿನಾಂಕ : *31-01-2025* ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಎದುರುದಾರರ ಪರ ಶ್ರೀ. ಆರ್. ಹೆಚ್. ಕೆ ವಕೀಲರಿಂದಃ**

2019 ರ ಜೂನ್ ತಿಂಗಳಿನಲ್ಲಿ ಸಂಜೆ 5.30 ಗಂಟೆ ಸುಮಾರಿಗೆ ಅಪಘಾತವಾಗಿರುತ್ತದೆ. ಅಪಘಾತವಾದ ಮರು ದಿನ ದೂರು ನೀಡಿರುತ್ತೇನೆ. ದೂರನ್ನು ಗುರುಪ್ರಸಾದ ಎನ್ನುವವರು ನೀಡಿರುತ್ತಾರೆ. ದೂರನ್ನು ಆಸ್ಪತ್ರೆಯಲ್ಲಿ ನೀಡಿರುತ್ತಾರೆ. ಗುರುಪ್ರಸಾದ ರವರು ದೂರು ನೀಡುವಾಗ ನಾನು ಇರಲಿಲ್ಲ. ಗುರುಪ್ರಸಾದ ರವರು ದೂರು ನೀಡಿದ ನಂತರ ನನಗೆ ತಿಳಿದಿರುತ್ತದೆ. ಅಪಘಾತವನ್ನು ಯಾರು ಮಾಡಿರುತ್ತಾರೆ ಮತ್ತು ಅಪಘಾತಪಡಿಸಿದ ವಾಹನ ಯಾವುದು ಎಂದು ತಿಳಿದುಕೊಂಡಿರುತ್ತೇನೆ. ದೂರಿನಲ್ಲಿ ಟ್ರ್ಯಾಕ್ಟರ್ ಮತ್ತು ಬೈಕ್ ನಮೂದಿಸಿದ ಬಗ್ಗೆ ಓದಿ ತಿಳಿದುಕೊಂಡಿರುತ್ತೇನೆ. ನಾನು ಗುನ್ನಾ ಸ್ಥಳದಲ್ಲಿ ಅಪಘಾತಪಡಿಸಿದ ವಾಹನವನ್ನು ನೋಡಿರುತ್ತೇನೆ. ಅಪಘಾತವಾದಾಗ ನಾನು ಊರಿನಲ್ಲಿದ್ದೆ. ಅಪಘಾತವಾದ ದಿನ ನನ್ನ ಮಗ ಕರಡಿ ಗ್ರಾಮಕ್ಕೆ ಹೋಗಿ ಬರುತ್ತಿದ್ದನು. ನನ್ನ ಮಗ ಮೋಟರ್ ಸೈಕಲ್ ಮೇಲೆ ಬರುತ್ತಿದ್ದನು. ಮೋಟರ್ ಸೈಕಲ್ ನಂಬರ್ ಹೇಳಲು ಆಗುವುದಿಲ್ಲ. ಟ್ರ್ಯಾಕ್ಟರ್ ನಂಬರ್ ನೆನಪು ಇರುವುದಿಲ್ಲ. ನನ್ನ ಮಗ ವೆಂಕನಗೌಡ, ಗುರುಪ್ರಸಾದ ಮತ್ತು ಭೀಮನಗೌಡ ಈ ಮೂರು ಜನರು ಮೋಟರ್ ಸೈಕಲ್ ಮೇಲೆ ಕರಡಿ ಗ್ರಾಮಕ್ಕೆ ಹೋಗಿ ವಾಪಾಸ್ಸು ಬರುತ್ತಿದ್ದರು. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಸಂಗತಿಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳನ್ನು ನಮ್ಮ ವಕೀಲರು ಬರೆದಿದ್ದು ನಾನು ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿದಾರರು ನಾನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎಂದು ಹೇಳುತ್ತಾರೆ. ನಾನು ಗುರುಪ್ರಸಾದ ರವರು ನೀಡಿದ ದೂರನ್ನು ನೋಡಿರುತ್ತೇನೆ. ಆ ದೂರಿನಲ್ಲಿ ಯಾವ ಯಾವ

ವಾಹನಗಳಿರುತ್ತವೆ ಎಂದು ಓದಿ ತಿಳಿದುಕೊಂಡಿರುತ್ತೇನೆ. ದೂರಿನಲ್ಲಿ, ಪ್ರಥಮ ವರ್ತಮಾನ ವರದಿಯಲ್ಲಿ ಮತ್ತು ಎಂ.ವ್ಹಿ. ವರದಿಯಲ್ಲಿ ಕೆಎ-29/ಟಿಎ-6662 ಎಂದು ಇರುತ್ತದೆ ಎಂದರೆ ಸರಿ. ದೂರಿನಲ್ಲಿ ಕೆಎ-29/ಟಿಎ-6662 ಇರುತ್ತದೆ ಎಂಬುದನ್ನು ಓದಿ ತಿಳಿದುಕೊಂಡಿರುತ್ತೇನೆ. ಗುರುಪ್ರಸಾದ ರವರು ದೂರು ನೀಡುವಾಗ ಅಪಘಾತಪಡಿಸಿದ ವಾಹನ ಯಾವುದು ಎಂಬುದನ್ನು ತಿಳಿದುಕೊಂಡು ದೂರು ನೀಡಿರುತ್ತಾನೆ ಎಂದರೆ ಸರಿ. ಅಪಘಾತವಾದಾಗ ಅಪಘಾತಪಡಿಸಿದ ವಾಹನದ ನಂ.ಕೆಎ-29/ಟಿಎ-6662 ಇತ್ತು ಎಂದರೆ ಸರಿ. ಈ ವಾಹನಕ್ಕೆ ವಿಮೆ ಇರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ಅರ್ಜಿಯಲ್ಲಿ ನಮೂದಿಸಿರುವ ಟ್ರ್ಯಾಕ್ಟರ್ ನಂ.ಕೆಎ-29/ಟಿಬಿ-7355 ಇದು ಅಪಘಾತಪಡಿಸಿದ ವಾಹನ ಅಲ್ಲ ಎಂದರೆ ಸರಿ. ದೂರಿನಲ್ಲಿ ಕಾಣಿಸಿರುವ ವಾಹನ ಮತ್ತು ನನ್ನ ಅರ್ಜಿಯಲ್ಲಿ ನಮೂದಿಸಿರುವ ವಾಹನ ಬೇರೆ ಬೇರೆಯಾಗಿದ್ದು, ನಾನು ಪರಿಹಾರದ ಹಣವನ್ನು ಪಡೆಯಲು ಬಾಧ್ಯಸ್ಥನಲ್ಲ ಎಂದರೆ ಸರಿಯಲ್ಲ. ನನಗೆ ಮತ್ತು ಎದುರುದಾರರ ಮಧ್ಯ ಮನಸ್ತಾಪ ಇರುವುದರಿಂದ ಅವರ ವಾಹನವನ್ನು ಸೇರಿಸಿದರೆ ಪರಿಹಾರ ಬರುತ್ತದೆ ಎಂದು ದುರುದ್ದೇಶದಿಂದ ಸದರಿ ಅರ್ಜಿಯಲ್ಲಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಟ್ರ್ಯಾಕ್ಟರ್ ನಂ.ಕೆಎ-29/ಟಿಬಿ-7355 ಇದರಿಂದ ನನ್ನ ಮಗನಿಗೆ ಅಪಘಾತ ಸಂಬವಿಸದೇ ಇರುವ ಕಾರಣ ಪರಿಹಾರದ ಹಣವನ್ನು ಪಡೆಯಲು ಬಾಧ್ಯಸ್ಥನಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ.